ಶ್ರೀ ಎಫ್. ಎಸ್. ತಾವರೆ.— ಮೊವಲಿನ ಅಂದಾಜಿಗೂ ಈಗ ಕೆಲಸ ಮುಗಿಯುವ ವೇಳೆಗೆ ಆಗತಕ್ಕ ಅಂದಾಜಿಗೂ 9 ಲಕ್ಷ ಚಿಲ್ಲರೆ ರೂಪಾಯಿಯಷ್ಟು ವ್ಯತ್ಯಾಸವಾಗುತ್ತದೆ. ಈ ರೀತಿ ವ್ಯತ್ಯಾಸವಾಗಲು ಪ್ಲಾನನ್ನು ಏನಾದರು ಬದಲಾವಣೆ ಮಾಡಿದ್ದೀರಾ ?

† ಶ್ರೀ ಎಚ್. ಎಂ. ಚನ್ನಬಸಪ್ಪ.—ಪ್ಲಾನ್ ಬದಲಾವಣೆಯಾಗಿಲ್ಲ. ಆದರೆ ಅನೇಕ ಕಾರಣ ಗಳಿಂದ ಹಣ ಜಾಸ್ತಿ ಖರ್ಚಾಗಿದೆ. ಅದರಲ್ಲಿ ಮುಖ್ಯವಾದುದು ಎಂದರೆ, ನೀರೆತ್ತುವ ಅಂದಾಜಿ ನಲ್ಲಿ ಲಂಪ್‌ಸಮ್ ಅಂದಾಜು ಮಾಡಿದ್ದು ಬಹಳ ಹೆಚ್ಚಾಯಿತು. ಇದೇ ಮುಖ್ಯವಾದ ಕಾರಣ.

ಶ್ರೀ ಎಫ್. ಎಸ್. ತಾವರೆ.—ಇದರೊಳಗೆ ಇಲಾಖೆಯವರು ಎಷ್ಟು ಕೆಲಸ ಮಾಡಿದ್ದಾರೆ, ಕಂಟ್ರಾಕ್ಟರ್ ಎಷ್ಟು ಕೆಲಸ ಮಾಡಿದ್ದಾರೆಂಬುದನ್ನು ತಿಳಿಸಬೇಕು ?

ಶ್ರೀ ಎಚ್. ಎಂ. ಚನ್ನಬಸಪ್ಪ.—7, 8, ಮತ್ತು 9ನೇ ಕಮಾನುಗಳಲ್ಲಿ ನೀರೆತ್ತುವ ಕೆಲಸ ವನ್ನು ಇಲಾಖೆಯವರೇ ಮಾಡಿದ್ದಾರೆ.

ಶ್ರೀ ಎಫ್. ಎಸ್. ತಾವರೆ. — ಕಂಟ್ರಾಕ್ಟರ್‌ಗಳಗನ್ನು ಸಮಾಧಾನ ಪಡಿಸುವುದಕ್ಕಾಗಿ ಹೆಚ್ಚು ಹಣ ಕೊಟ್ಟಿರುವುದು ನಿಜವೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಇದರಲ್ಲಿ ಕಂಟ್ರಾಕ್ಟರ್‌ಗಳನ್ನು ಸಮಾಧಾನ ಮಾಡುವ ಪ್ರಶ್ನೆಯೇ ಇಲ್ಲ. ಇದರಲ್ಲಿ ಇಲಾಖೆಯವರು ಬಹುಭಾಗದ ಕೆಲಸ ಮಾಡಿಲ್ಲ. ಕಂಟ್ರಾಕ್ಟ್ ಕೊಟ್ಟಿರತಕ್ಕಂಥ ಅಂದಾಜಿನ ಮೇಲೆ 32 ಪರ್‌ಸೆಂಟ್ ಹೆಚ್ಚಿಗೆ ಅಕ್ಸೆಪ್ಟ್ ಮಾಡಿರುವುದು ಅಂದರೆ ಅಂದಾಜು 14 ಲಕ್ಷ ರೂಪಾಯಗಳಿದ್ದರೆ, ಮೂರನೇ ಒಂದು ಭಾಗದಷ್ಟು ಅಂದರೆ ನಾಲ್ಕೂವರೆ ಲಕ್ಷ ರೂಪಾಯಿ ಹೆಚ್ಚಾಗುತ್ತದೆ. ಈ ಯೋಜನೆಯ ಕೆಲಸ ನಿಧಾನವಾಗಿರುವುದಕ್ಕೆ ಮತ್ತು ಹೆಚ್ಚು ಹಣ ಖರ್ಚಾಗಿರುವುದಕ್ಕೆ ಮುಖ್ಯವಾದ ಕಾರಣವೆಂದರೆ, ನೀರೆತ್ತುವ ಕೆಲಸದಲ್ಲಿ ಎಡರು ತೊಡರುಗಳು ಬಂದಿದ್ದು. ಅದಕ್ಕಾಗಿಯೇ ಹೆಚ್ಚು ಹಣ ಖರ್ಚಾಗುವುದಕ್ಕೆ ಕಾರಣವಾಯಿತು.

Construction of Bus Stands and pick up sheds in Khanapur Taluk

382. **Sri N. B. SIRDESAI** (Khanapur).—

Will the Minister for Labour be pleassd to state :—

(*a*) whether Government is aware of the necessity of full fledged bus-stands at all the towns and pick-up sheds at all the important villages ; if so, whether survey has been taken up in the matter ;

(*b*) whether Government have received representations from the Legislator from Khanapur in connection with the necessity of a bus stand at Khanapur and pick-up sheds in villages ; if so, the action taken in the matter ?

Sri AZEEZ SAIT (Minister for Labour).—

(*a*) Yes.

Construction of bus stations and shelters is being taken up depending on (i) traffic requirements (ii) availability of land and (iii) availability of funds.

(*b*) Yes.

(SRI AZEEZ SAIT)

Considering the necessity of a bus stand at Khanapur, a site measuring 200' × 20 /' of Government waste land out of Survey No. 48 of Khanapur has been secured, but this allotment has been challenged by the Goa Panchayat Gairon Trust Committee in the Munsiff's Court at Khanapur. Early action will be taken to provide the said bus stand on taking possession of the site.

Proposals for providing Pick up sheds at Bidi, Panishwad, Hire-Munoli and Nandagad are under consideration of M.S.R.T.C.

Sri N. B. SIRDESAI.—Is not the Government aware that survey No. 48 of Khanapur is a Government waste land and now it vests in the Town Panchayat of Khanapur. So, the Gairon Trust Committee has no locus standi to challenge in any court of law and stop the work.

†Sri AZEEZ SAIT,— The challenge is there before the court and we have to wait till the judgment is over.

Sri N. B. SIRDESAI.—May I know whether Government will accept the new proposals for providing pick-up sheds in various areas of Khanapur Taluka ?

Sri AZEEZ SAIT.—About pick-up sheds and bus stands I have already said that I have taken a decision. Till I get the report from the Sub-Committee as to their necessity I am not in a position to to take up the construction of bus stands or pick-up stands.

Sri B. B. SAYANAK.—(*Marathi*)

Sri AZEEZ SAIT.—(*Gujarathi*)

Sri V. N. PATIL.—(*Urdu*)

Sri AZEEZ SAIT.—(*Urdu*)

ಅಧ್ಯಕ್ಷರು — ಮಾನ್ಯ ಸದಸ್ಯರು ಯಾವ ಭಾಷೆಯಲ್ಲಿ ಬೇಕಾದರೂ ಪ್ರಶ್ನೆಯನ್ನು ಕೇಳಬಹುದು. ಅದರ ತಾವು ಕೇಳತಕ್ಕ ಪ್ರಶ್ನೆಗಳು ಈ ಸಭೆಯ ಗಮನಕ್ಕೆ ಬಂದು ಅವು ರೆಕಾರ್ಡ್ ಆಗಬೇಕು ಎಂದು ತಮ್ಮ ಅಪೇಕ್ಷೆ ಇದ್ದರೆ ಕನ್ನಡದಲ್ಲಿ ಅಥವಾ ಇಂಗ್ಲೀಷಿನಲ್ಲಿ ಪ್ರಶ್ನೆಗಳನ್ನು ಕೇಳಬಹುದು. ಇಲ್ಲದೇ ಹೋದರೆ ತಮಗೆ ಯಾವ ಭಾಷೆ ಬೇಕೋ ಆ ಭಾಷೆಯಲ್ಲಿ ಪ್ರಶ್ನೆಯನ್ನು ಕೇಳಬಹುದು.

Sri V. N. PATIL —(*Urdu*)

Sri AZEEZ SAIT.—(*Urdu*)

Letters Addressed to Ministers by M. L. As.

406. Sri K. SRIRAMULU (Gandhinagar).—

Will the Chief Minister be pleased to state:—

(*a*) whether it has come to the notice of the Government that whenever members of the Legislative Assembly write letters to the Ministers they do not get any reply from the concerned ;

(*b*) if so, the reasons for the same ?